**CW-1**

ಇಂದು ದಿ:**24-10-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಮಧ್ಯಂತರ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎ.ಎಂ ವಕೀಲರಿಂದ 8 ಮತ್ತು 9 ನೇ ಎದುರುದಾರರ ಪರಃ**

ನಾನು ಈಗ ಚನ್ನಗಿರಿಯ ಎ.ಡಿ.ಎಲ್.ಆರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿಮಗೆ ಈ ದಿನ ನ್ಯಾಯಾಲಯದ ತಾರೀಖು ಇದೆ ಎಂದು ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ವಾಟ್ಸಪ್ ನಲ್ಲಿ ನನಗೆ ವಕೀಲರು ಕಳುಹಿಸಿದ್ದರು ಎಂದು ಹೇಳುತ್ತಾರೆ. ಕಮೀಷನರ್ ವರದಿಯನ್ನು ನ್ಯಾಯಾಲಯಕ್ಕೆ ಯಾರು ಸಲ್ಲಿಸಿದರು ಎಂದರೆ ಸಾಕ್ಷಿ ಅವತ್ತಿನ ದಿನ ಯಾರು ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದ ದಿನ, ನಾನು ವರದಿಯನ್ನು ನ್ಯಾಯಾಲಯಕ್ಕೆ ಅವತ್ತಿನ ದಿನ ಬಂದು ಸಲ್ಲಿಸಿಲ್ಲ ಎಂದರೆ ಸರಿ. ಯಾವ ಯಾವ ದಾಖಲೆಗಳನ್ನು ವರದಿಯೊಂದಿಗೆ ಅವತ್ತಿನ ದಿನ ಸಲ್ಲಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿಗೆ ಅಸಲು ದಾವೆಯಲ್ಲಿ ನಿ.ಪಿ-1 ಎಂದು ನಿಶಾನೆ ಗೊಳಿಸಲಾಗಿರುವ ಪಹಣಿಯ ದೃಢೀಕೃತ ನಕಲನ್ನು ತೋರಿಸಿ, ಅದರಲ್ಲಿ ಸರ್ವೆ ನಂಬರ್-15/1 ಎಂದು ಇದ್ದು, ಸ್ವಾಧೀನದಾರರ ಹೆಸರು ಮತ್ತು ದಿನಾಂಕಃ29-09-2009 ರ ಮುಟೇಷನ್ ಎಂಟ್ರಿಯ ಬಗ್ಗೆ ನಮೂದು ಇದೆ ಎಂದರೆ ಸರಿ. ಅದರ ಆಕಾರ ರೂ.1.15 ಪೈಸೆ ಇದೆ. ಸದರಿ ಪಹಣಿ ಪತ್ರಿಕೆಯನ್ನು ನಿ.ಆರ್-10 ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಸಲು ದಾವೆಯಲ್ಲಿ ನಿ.ಪಿ-2 ಎಂದು ನಿಶಾನೆಗೊಂಡಿರುವ ಪಹಣಿಯ ದೃ.ನಕಲನ್ನು ತೋರಿಸಿ ಅದರಲ್ಲಿ ಸರ್ವೆ ನಂಬರ್ 15/2, 0.15.08.00 ಗುಂಟೆ ಎಂದು ಇದ್ದು, ಆಕಾರ 1 ರೂ, 8 ನೇ ಎದುರುದಾರನ ಹೆಸರು ಮತ್ತು MR No.10/2010, 2011 ಎಂದು ಇದೆ ಎಂದರೆ ಸರಿ. ಅದನ್ನು ನಿ.ಆರ್-11 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಅಸಲು ದಾವೆಯಲ್ಲಿ ನಿ.ಪಿ-3 ಎಂದು ನಿಶಾನೆಗೊಳಿಸಲಾಗಿರುವ ಪಹಣಿಯ ದೃ.ನಕಲನ್ನು ತೋರಿಸಿ, ಅದರಲ್ಲಿ ಸರ್ವೆ ನಂಬರ್ 15/3 ಎಂದು ಇದ್ದು, 0.32.00.00 ಗುಂಟೆ ಎಂದು ಇದ್ದು, ಆಕಾರ ರೂ.2.08 ಪೈಸೆ, 9 ನೇ ಎದುರುದಾರನ ಹೆಸರು ಮತ್ತು MR No.9/2010-11 ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-12 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಅಸಲು ದಾವೆಯಲ್ಲಿ ನಿ.ಪಿ-4 ಎಂದು ನಿಶಾನೆಗೊಳಿಸಲಾಗಿರುವ ಪಹಣಿಯ ದೃ.ನಕಲನ್ನು ತೋರಿಸಿ, ಅದರಲ್ಲಿ ಸರ್ವೆ ನಂಬರ್ 16/1 ಎಂದು ಇದ್ದು, 0.27.08.00 ಗುಂಟೆ ಎಂದು ಇದ್ದು, ಆಕಾರ ರೂ.1.80 ಪೈಸೆ ಎಂದು ಇದ್ದು, MR No.3/2009-10 ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-13 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಅಸಲು ದಾವೆಯಲ್ಲಿ ನಿ.ಪಿ-5 ಎಂದು ನಿಶಾನೆಗೊಳಿಸಲಾಗಿರುವ ಪಹಣಿಯ ದೃ.ನಕಲನ್ನು ತೋರಿಸಿ, ಅದರಲ್ಲಿ ಸರ್ವೆ ನಂಬರ್ 16/2 ಎಂದು ಇದ್ದು, 0.30.08.00 ಗುಂಟೆ ಎಂದು ಇದ್ದು, ಆಕಾರ ರೂ.1.98 ಪೈಸೆ, 8 ನೇ ಎದುರುದಾರನ ಹೆಸರು ಮತ್ತು MR No.10/2010-11 ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-14 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಅಸಲು ದಾವೆಯಲ್ಲಿ ನಿ.ಪಿ-6 ಎಂದು ನಿಶಾನೆಗೊಳಿಸಲಾಗಿರುವ ಪಹಣಿಯ ದೃ.ನಕಲನ್ನು ತೋರಿಸಿ, ಅದರಲ್ಲಿ ಸರ್ವೆ ನಂಬರ್ 16/3 ಎಂದು ಇದ್ದು, 1 ಎಕರೆ 25.00 ಎಂದು ಇದ್ದು, ಆಕಾರ ರೂ.4.22 ಪೈಸೆ, 9 ನೇ ಎದುರುದಾರನ ಹೆಸರು ಮತ್ತು MR No.9/2010-11 ಎಂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಆರ್-15 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಕಮೀಷನರ್ ವರದಿಯ ಜೊತೆಗೆ ಇರುವ ಕಮೀಷನರ್ ಸ್ಕೆಚ್ ಗಳನ್ನು

ತೋರಿಸಿ ಅವುಗಳ ಮೇಲೆ ತಾರೀಖು ಬರೆದಿಲ್ಲ ಎಂದರೆ ಸರಿ. ಆ ದಿನ ವಾದಿಯರು ಮತ್ತು 1 ರಿಂದ 7 ನೇ ಪ್ರತಿವಾದಿಯರು ಸರ್ವೆ ನಂಬರ್ 15/2 ಮತ್ತು 16/2 ರ ಪಹಣಿಗಳನ್ನು ನಿಮಗೆ ತೋರಿಸಿದ್ದಾರಾ ಎಂದರೆ ಸಾಕ್ಷಿ ಅಳತೆಗೆ ಹೋದ ದಿನ ತೋರಿಸಿದ್ದಾರೆ ಎಂದು ಹೇಳುತ್ತಾರೆ. ಅತಳೆಗೆ ಹೋದ ದಿನ ಸರ್ವೆ ನಂಬರ್ 15/2 ಮತ್ತು 16/2 ರಲ್ಲಿನ ನಮೂದಿಸಿದ ಅಳತೆಗಳು, ಯಾರ ಹೆಸರಿನಲ್ಲಿ ಇವೆ, ಅದರ ಆಕಾರ ಮತ್ತು ಮುಟೇಷನ್ ಎಂಟ್ರಿಗಳನ್ನು ನಾನು ನೋಡಿರುತ್ತೇನೆ. ನಾನು ಸರ್ವೆ ನಂಬರ್ 15/1, 15/3, 16/2 ಮತ್ತು 16/3 ಇವುಗಳ ಪಹಣಿಗಳನ್ನು ನಾನು ಅಳತೆಯ ದಿವಸ ನೋಡಿರುತ್ತೇನೆ. ನನ್ನ ಗಮನಕ್ಕೆ ಈ ಪಹಣಿಗಳ ಬಗ್ಗೆ ಬಂದರೂ ನಾನು ವರದಿಯಲ್ಲಿ ಅದನ್ನು ನಮೂದಿಸಿಲ್ಲ ಎಂದರೆ ಸರಿ. ಸರ್ವೆ ನಂಬರ್ 15/2 ಮತ್ತು 16/2 ರ ಕುರಿತು ಮಾತ್ರ ಕಮೀಷನರ್ ವರದಿ ಸಲ್ಲಿಸಬೇಕು ಎಂದು ಆದೇಶ ಆಗಿತ್ತು ಎಂದರೆ ಸರಿಯಲ್ಲ.

ಸಾಕ್ಷಿಗೆ ಅಸಲು ದಾವೆ ನಂಬರ್-3/2011 ರ ತೀರ್ಪಿನ ದೃ.ನಕಲನ್ನು ತೋರಿಸಿ ಅದರಲ್ಲಿ ಸರ್ವೆ ನಂಬರ್ 15/2 ಮತ್ತು 16/2 ಎ ಶೆಡ್ಯೂಲ್ ಆಸ್ತಿ ಕುರಿತು ಪಾಲು ವಿಭಾಗಕ್ಕೆ ತೀರ್ಪು ಆಗಿದೆ ಎಂದರೆ ಸರಿ. ಸಾಕ್ಷಿ ವಿಸ್ತೀರ್ಣವನ್ನು ಸಹ ನಮೂದಿಸಲಾಗಿದೆ ಎಂದು ಹೇಳುತ್ತಾರೆ. ಸದರಿ ತೀರ್ಪು ಮತ್ತು ಪ್ರಾಥಮಿಕ ಡಿಕ್ರಿಯನ್ನು ನಿ.ಆರ್-16 ಮತ್ತು ನಿ.ಆರ್-17 ಎಂದು ಗುರುತಿಸಲಾಯಿತು.

ಸರ್ವೆ ನಂಬರ್ 15/2 ಮತ್ತು 16/2 ಇವುಗಳ ಕುರಿತು ಈ ಅಸಲು ದಾವಾ ನಂಬರ್ 3/2011 ಆಗುವ ಮೊದಲೇ ಹಿಸ್ಸೆ ಮತ್ತು ಮುಟೇಷನ್ ಎಂಟ್ರಿಗಳು ಆಗಿದ್ದವು ಎಂದರೆ ಸರಿ. ನಾನು ಸ್ಥಳಕ್ಕೆ ಹೋಗದೇ ಯಾವುದೇ ಅಳತೆ ಮಾಡದೇ, ನ್ಯಾಯಾಲಯದ ಆದೇಶ ಪಾಲನೆ ಮಾಡದೇ, ಯಾರಿಗೋ ಸಹಾಯ ಮಾಡಲು ಕಚೇರಿಯಲ್ಲಿ ಕುಳಿತು ಸುಳ್ಳು ವರದಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡದೇ, ಕಾನೂನಿಗೆ ವಿರುದ್ಧವಾದ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅಳತೆ ಮಾಡಿದ ದಿನ ಎದುರುದಾರರು ಯಾರು ಹಾಜರು ಇರಲಿಲ್ಲ. ಅರ್ಜಿದಾರರು ಮತ್ತು ಎದುರುದಾರರ ಸಮಕ್ಷಮ ಅಳತೆ ಮಾಡಬೇಕು ಎಂದು ನ್ಯಾಯಾಲಯದ ಆದೇಶ ಇತ್ತು ಎಂದರೆ ಸಾಕ್ಷಿ, ನೋಟೀಸ್ ಕೊಟ್ಟಿದ್ದೆನು ಬಂದಿಲ್ಲ ಎಂದು ಹೇಳುತ್ತಾರೆ. ನೋಟೀಸ್ ಕೊಟ್ಟ ಬಗ್ಗೆ, ತಲುಪಿದ ಬಗ್ಗೆ ನಾನು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮಹಜರ್ ನಲ್ಲಿ ಇದೆ ಎಂದು ಹೇಳುತ್ತಾರೆ. ನನ್ನ ವರದಿಯಲ್ಲಿ ಎದುರುದಾರರಿಗೆ ಆರ್.ಪಿ.ಎ.ಡಿ ಮುಖಾಂತರ ನೋಟೀಸ್ ಕಳುಹಿಸಿದ ಬಗ್ಗೆ ಮತ್ತು ಅದರ ಸ್ವೀಕೃತಿ ವಾಪಸ್ಸು ಬಂದ ಬಗ್ಗೆ ನನ್ನ ವರದಿಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಹಾಗಾದರೆ ವರದಿಯಲ್ಲಿ ಅಂಚೆ ರಶೀದಿ, ಅಂಚೆ ಸ್ವೀಕೃತಿಪತ್ರ ತೋರಿಸಿ ಎಂದು ಕೇಳಲು ಸಾಕ್ಷಿ ನೋಟೀಸ್ ನ್ನು ತೋರಿಸಿ, ನಮ್ಮ ಕಚೇರಿಯ ಗುಮಾಸ್ತರಿಗೆ ಕಳುಹಿಸಲು ಕೊಟ್ಟಿರುತ್ತೇವೆ, ಅವರ ಬಳಿ ಇರುತ್ತದೆ ಎಂದು ಹೇಳುತ್ತಾರೆ. ವರದಿಯಲ್ಲಿ ಅಂಚೆ ರಶೀದಿ ಮತ್ತು ಸ್ವೀಕೃತಿ ಪತ್ರ ಇಲ್ಲ ಎಂದರೆ ಸರಿ. ಸಾಕ್ಷಿ ಕಚೇರಿಯಲ್ಲಿ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಮಹಜರ್ ಗೆ ಯಾವ ವ್ಯಕ್ತಿಗಳು ಹಾಜರು ಇದ್ದರೋ ಅವರು ಸಹಿ ಮಾಡಿದ್ದಾರೆ ಎಂದರೆ ಸರಿ. ದುರುದ್ದೇಶದಿಂದ ವಾದಿಯರಿಗೆ ಸಹಾಯ ಮಾಡಲು ನಾನು ನ್ಯಾಯಾಲಯದ ಆದೇಶವನ್ನು ಮೀರಿ, ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 9 ನೇ ಎದುರುದಾರರಿಗೆ ನಷ್ಟ ಮಾಡುವ ಉದ್ದೇಶದಿಂದ ಮತ್ತು 1 ರಿಂದ 7 ನೇ ಎದುರುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವರದಿ ಕಾನೂನಾತ್ಮಕವಾಗಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.